ಹೆಸರು ಗಳಿಸಿ ಪ್ರಸಿದ್ಧರಾಗುತ್ತಿದ್ದರು. ಅವರ ಹೆಸರು ಯೂರೋಪಿನ ಎಲ್ಲಾ ದೇಶಗಳಿಗೂ ಪಸರಿಸಿತು. ಆದರೆ ಮಿಲೇವಾ ಗಂಡನಷ್ಟೇ ಓದಿದ್ದರೂ ಮನೆಯ ಕೆಲಸ ಮಾಡುತ್ತಾ, ಮಕ್ಕಳನ್ನು ಹೆತ್ತು, ಗೃಹಿಣಿಯಾದರು. ವಿಜ್ಞಾನ ಅವರಿಂದ ದೂರವಾಯಿತು. ಅದಲ್ಲದೆ, ವಿಜ್ಞಾನ ಓದಿದ ಗಂಡ ಗುಮಾಸ್ತನಾಗಿ ಕೆಲಸ ಮಾಡುವುದು ಅವರಿಗೆ ಸ್ವಲ್ಪವೂ ಸರಿದೋರಲಿಲ್ಲ. ಶಾಲಾ ಉಪಾಧ್ಯಾಯನಾದರೂ ಸರಿ, ಈ ಕೆಲಸ ಬೇಡ ಎಂದು ಮಿಲೇವಾ ಹಟ ಹಿಡಿದರು. ಗಂಡ ಕೇಳಿಸಿಕೊಳ್ಳಲಿಲ್ಲ.

ಬಹುದಿನಗಳ ನಂತರ ಐನ್‌ಸ್ಟೈನ್ ಹೇಳಿದ ಒಂದು ಮಾತು ಬಹು ಮಾರ್ಮಿಕವಾಗಿದೆ. 'ನನ್ನ ಮನಸ್ಸು ಎಷ್ಟೋ ಬಾರಿ ಅವಳನ್ನು ಮದುವೆಯಾಗಬೇಡ ಎಂದು ಎಚ್ಚರಿಸಿತು. ಆದರೆ ನಾನು ಕರ್ತವ್ಯದ ದೃಷ್ಟಿಯಿಂದ ಅವಳನ್ನು ಮದುವೆಯಾದೆ'.

ಕೆಲವು ವಲಯಗಳಲ್ಲಿ ಒಂದು ಊಹಾಪೋಹ ಸರಿದಾಡಿದ್ದೂ ಉಂಟು. ಅದೇಂದರೆ, ಸಾಪೇಕ್ಷ ಸಿದ್ಧಾಂತದ ವೃದ್ಧಿಯಲ್ಲಿ ಮಿಲೇವಾ ಗಂಡನಿಗೆ ಸಾಕಷ್ಟು ನೆರವು ನೀಡಿದರು. ಅದರ ಬಗ್ಗೆ ಬರೆದ ಪೇಪರಿನ ಮೊದಲ ಆವೃತ್ತಿಯಲ್ಲಿ ಅವರ ಹೆಸರೂ ಇತ್ತು. ಅದನ್ನು ನಂತರ ತೆಗೆಯಲಾಯಿತು. ತನ್ನ ತಾಯಿಯು ತಂದೆಗೆ ಗಣಿತ ವಿಷಯಗಳಲ್ಲಿ ಸಹಾಯ ಮಾಡಿದ್ದು ನಿಜವೆಂದು ಐನ್‌ಸ್ಟೈನನ ಮಗ ಕೂಡ ಒಪ್ಪಿಕೊಂಡಿದ್ದಾರೆ.

ದಂಪತಿಗೆ ಇಬ್ಬರು ಗಂಡು ಮಕ್ಕಳಾದರು: ಹ್ಯಾನ್ಸ್ ಅಲ್ಬರ್ಟ್ ಐನ್‌ಸ್ಟೈನ್ (1904–1973) ಮತ್ತು ಎಡ್ವರ್ಡ್ ಐನ್‌ಸ್ಟೈನ್ (1910–1965). ಮೊದಲ ಮಗ ಮುಂದೆ ಅಮೆರಿಕದ ಬರ್ಕ್ಲಿ ವಿಶ್ವವಿದ್ಯಾಲಯದಲ್ಲಿ ಸಿವಿಲ್ ಎಂಜಿನಿಯರಿಂಗ್ ಪ್ರೊಫೆಸರ್ ಆದರು. ಎರಡನೆಯ ಮಗ ಸ್ಕಿಜೋಫ್ರೇನಿಯಾಕ್ಕೆ ತುತ್ತಾಗಿ ಜೀವನವಿಡೀ ನರಳಿದರು.

ಗಂಡ ಹೆಸರು ಮಾಡಿದಷ್ಟೂ ಹೆಂಡತಿಗೆ ತನ್ನ ಜೀವನ ವ್ಯರ್ಥವಾಯಿತು ಎಂಬ ಭಾವನೆ ತೀವ್ರವಾಗುತ್ತಾ ಬಂತು. ಅವರ ಆರೋಗ್ಯವೂ ಕ್ಷೀಣಿಸುತ್ತಾ ಬಂತು. ಸಂಧಿವಾತ ತಲೆದೋರಿತು. ಇವೆಲ್ಲದರ ಪರಿಣಾಮ, ಅವರಿಗೆ ಐನ್‌ಸ್ಟೈನರಿಗೆ ಸಂಬಂಧಿಸಿದ ಎಲ್ಲರ ಬಗ್ಗೆಯೂ ಅಸಹನೆ ಪ್ರಾರಂಭವಾಯಿತು – ಅವರ ತಾಯಿ, ತಂಗಿ ಮತ್ತು ಸ್ನೇಹಿತರು.

ದಾಂಪತ್ಯದ ಶ್ರುತಿ ತಪ್ಪಿದ ಸಮಯದಲ್ಲಿ ಐನ್‌ಸ್ಟೈನ್ ತನ್ನ ಬಾಲ್ಯ ಗೆಳತಿ ಮತ್ತು ಸಂಬಂಧಿ ಎಲ್ಸಾಳನ್ನು ಎಲ್ಲಿಯೋ 1912ರಲ್ಲಿ ಮತ್ತೆ ಸಂಧಿಸಿದ. 36 ವರ್ಷ ವಯಸ್ಸಿನ ಆಕೆ ಎರಡು ಹೆಣ್ಣುಮಕ್ಕಳ ತಾಯಿಯಾಗಿದ್ದು, ಗಂಡನಿಂದ ವಿಚ್ಛೇದನ ಪಡೆದಿದ್ದರು. ಮಿಲೇವಾಳಲ್ಲಿ ಇರದಿದ್ದ ಒಳ್ಳೆಯ ಗುಣಗಳೆಲ್ಲ ಎಲ್ಸಾಳಲ್ಲಿ ಇರುವಂತೆ ತೋರಿತು. ಇಬ್ಬರ ಗುಣವಿಶೇಷಗಳು ತದ್ವಿರುದ್ಧವಾಗಿದ್ದವು. ಮಿಲೇವಾ ಬುದ್ಧಿವಂತೆ ಮತ್ತು ಜಟಿಲೆ. ಎಲ್ಸಾ ಸ್ಫುರದ್ರೂಪಿ, ಸರಳೆ ಮತ್ತು ಸಾಮಾನ್ಯ ಹೆಣ್ಣು. ಆಕೆ ತನ್ನನ್ನು ತಾಯಿಯಂತೆ ನೋಡಿಕೊಳ್ಳುತ್ತಾಳೆ ಎಂಬ ಭರವಸೆ ಐನ್‌ಸ್ಟೈನರಲ್ಲಿ ಮೂಡಿತು. ಇಬ್ಬರ ಮಧ್ಯೆ ಪತ್ರ ವ್ಯವಹಾರ ಪ್ರಾರಂಭವಾಯಿತು. ಒಂದು ಪತ್ರದಲ್ಲಿ 'ನಾನು ಯಾರನ್ನಾದರೂ ಪ್ರೇಮಿಸಲೇಬೇಕು. ಇಲ್ಲದಿದ್ದರೆ ಜೀವನ ಘೋರವಾಗುತ್ತದೆ. ಅದು ಯಾರು ಅಂದರೆ ನೀನೇ!' ಎಂದು ಐನ್‌ಸ್ಟೈನ್ ಬರೆದಿದ್ದಾರೆ.


ಮೊದಲ ಪತ್ನಿ ಮಿಲೇವಾ ಜೊತೆ ಐನ್‌ಸ್ಟೈನ್

ಈ ಮಧ್ಯೆ ಐನ್‌ಸ್ಟೈನರಿಗೆ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಫಿಸಿಕ್ಸ್ ವಿಭಾಗದ ಪೀಠವನ್ನು ಅಲಂಕರಿಸುವಂತೆ ಆಹ್ವಾನ ನೀಡಲಾಯಿತು. ಕೂಡಲೇ ಒಪ್ಪಿಕೊಂಡರು, ಕಾರಣ ಎಲ್ಸಾ ಇದ್ದದ್ದು ಬರ್ಲಿನ್‌ನಲ್ಲಿಯೇ!

ಐನ್‌ಸ್ಟೈನ್ ಹೊಸ ಹುದ್ದೆ ಒಪ್ಪಿಕೊಳ್ಳುತ್ತಿದ್ದಂತೆಯೇ ಎಲ್ಸಾ ಅವರಿಗಾಗಿ ಒಂದು ಮನೆ ಗೊತ್ತುಮಾಡಿದರು. ಐನ್‌ಸ್ಟೈನ್ ಮಿಲೇವಾ ಮತ್ತು ತನ್ನ ಇಬ್ಬರು ಮಕ್ಕಳನ್ನು ಅಲ್ಲಿಗೆ ಕರೆದೊಯ್ದರು. ಚಕಮಕಿ ಪ್ರಾರಂಭವಾಯಿತು. 'ಅವಳಿಗೆ ವಿಚ್ಛೇದನ ಕೊಟ್ಟು ನನ್ನ ಜೊತೆ ಬಂದಿರು' ಎಂದು ಎಲ್ಸಾ ಒತ್ತಾಯ ಹೇರಿದರು. ಇತ್ತ ಮಿಲೇವಾ 'ಜ್ಯೂರಿಚ್ ಬಿಟ್ಟು ಬಂದಿದ್ದು ದೊಡ್ಡ ತಪ್ಪಾಯಿತು' ಎಂದು ಕೊರಗತೊಡಗಿದರು.

ಐನ್‌ಸ್ಟೈನರಿಗೆ ಫಿಸಿಕ್ಸ್ ಅಲ್ಲದೆ ಮತ್ತೇನೂ ಬೇಕಾಗಿರಲಿಲ್ಲ. ಸಂಸಾರದ ಸಮಸ್ಯೆಗಳು ಅವರನ್ನು ಕಾಡುತ್ತಿದ್ದವು. ಇಬ್ಬರು ಸಂಗಾತಿಗಳ ನಡುವೆ ಹಣ್ಣಾದರು.

ಬರ್ಲಿನ್‌ಗೆ ಬಂದು ಇನ್ನೂ ಎರಡೇ ತಿಂಗಳು. 'ಇನ್ನು ಸಾಕು ಇವನ ಗೊಡವೆ' ಎಂದು ಮಿಲೇವಾ ಮಕ್ಕಳೊಡನೆ ಹೇಬರ್ ಎಂಬ ಕುಟುಂಬದ ಮಿತ್ರನ ಮನೆಗೆ ಹೋಗಿ ನೆಲೆಸಿದರು. ಈ ಹೇಬರ್ ಮತ್ತಾರೂ ಅಲ್ಲ, ಅಮೋನಿಯಾ ತಯಾರಿಕೆಯ ವಿಧಾನವನ್ನು ಕಂಡುಹಿಡಿದು ನೊಬೆಲ್ ಬಹುಮಾನ ಪಡೆದ ವಿಜ್ಞಾನಿ. ಅವರ ಸಮ್ಮುಖದಲ್ಲಿ ದಂಪತಿ ಸಂಧಿಸಿ ಮಾತುಕತೆ ನಡೆಸಿದರು.

ಆಗ ಐನ್‌ಸ್ಟೈನ್ ನಡೆದುಕೊಂಡ ರೀತಿ ನಿಜಕ್ಕೂ ವಿಸ್ಮಯಕಾರಿ. ಮಿಲೇವಾ ತನ್ನೊಡನೆ ಮುಂದೆಯೂ ವಾಸಿಸಬೇಕಾದರೆ ಈ ನಿಯಮಗಳನ್ನು ಪಾಲಿಸತಕ್ಕದ್ದು ಎಂದು ಒಂದು ಕರಾರು ಪತ್ರವನ್ನು ಅವರ ಮುಂದಿಟ್ಟರು. ಅದರ ಪ್ರಕಾರ:

## ಮಿಲೇವಾ ಕರ್ತವ್ಯಗಳು

- ನನ್ನ ಉಡುಪುಗಳನ್ನು ಶುಭ್ರವಾಗಿರಿಸುವುದು.
- ಪ್ರತಿದಿನ ಮೂರು ಊಟಗಳನ್ನು ನನ್ನ ಕೊಠಡಿಗೆ ತಂದು ಕೊಡುವುದು.
- ನನ್ನ ಮಲಗುವ ಕೊಠಡಿ ಮತ್ತು ಆಫೀಸು ಸದಾ ಚೊಕ್ಕಟವಾಗಿರಬೇಕು. ನನ್ನ ಮೇಜು ನನಗೊಬ್ಬನಿಗೇ ಇರತಕ್ಕದ್ದು.

## ಪಾಲಿಸಬೇಕಾದ ಷರತ್ತುಗಳು

- ನನ್ನೊಡನೆ ಯಾವುದೇ ಸಾಮಾಜಿಕ ಅವಶ್ಯಕತೆ ತೋರಿಬರದೆ ಹೋದರೆ, ವೈಯಕ್ತಿಕ ಸಂಬಂಧ ಇಟ್ಟುಕೊಳ್ಳುವಂತಿಲ್ಲ. ನೀನು ನನ್ನೊಡನೆ ಕೂರುವಂತಿಲ್ಲ. ನನ್ನೊಡನೆ ಪ್ರಯಾಣ ಮಾಡುವಂತಿಲ್ಲ.
- ನೀನು ನನ್ನಿಂದ ಯಾವುದೇ ಅನ್ಯೋನ್ಯತೆ ನಿರೀಕ್ಷಿಸಬಾರದು. ಅಲ್ಲದೆ ನನ್ನನ್ನು ಯಾವುದೇ ಕಾರಣಕ್ಕೆ ನಿಂದಿಸಬಾರದು.
- ನಾನು ಹೇಳಿದ ತಕ್ಷಣ ನನ್ನೊಡನೆ ಮಾತನಾಡುವುದನ್ನು ನಿಲ್ಲಿಸಬೇಕು.
- ನಾನು ಕೇಳಿದ ತಕ್ಷಣ ನೀನು ನನ್ನ ಮಲಗುವ ಕೊಠಡಿ ಅಥವಾ ಆಫೀಸಿನಿಂದ ಹೊರಹೋಗಬೇಕು.
- ಮಕ್ಕಳ ಮುಂದೆ ಯಾವ ಕಾರಣಕ್ಕೂ ನನ್ನನ್ನು ಕಡೆಗಣಿಸಬಾರದು.

ಈ ಷರತ್ತುಗಳನ್ನು ಹಾಕಿದಾಗ ಐನ್‌ಸ್ಟೈನರ ಮನೋಸ್ಥಿತಿ ಹೇಗಿತ್ತೋ ಯಾರು ಬಲ್ಲರು? ಮಿಲೇವಾಳ ಸಂಬಂಧವನ್ನು ಹೇಗೋ ಕಡಿದುಕೊಳ್ಳಲು ಹೀಗೆ ಮಾಡಿರಬಹುದು.